# ಜಲ ತರಂಗ

ಸಂಜೆ ಆಫೀಸಿನಿಂದ ಹೊರಬಿದ್ದು, ಬಸ್ಸು ಹಿಡಿಯಲು ವಿಧಾನಸೌಧದ ಹತ್ತಿರಕ್ಕೆ ನಡೆಯಲಾರಂಭಿಸಿದೆ, ಮಳೆಯಾಕಾಶ ಮುನಿಸಿಕೊಂಡು ಕಪ್ಪಗಾಗಿತ್ತು. ಹಾದು ಬರುತ್ತಿದ್ದ ವಾಹನಗಳ ನಡುವೆ ಓಡೋಡುತ್ತ ರಾಜಭವನದ ಬಾಗಿಲು ತಲುಪುವಷ್ಟರಲ್ಲಿ ಮಳೆಯ ಧಾಳಿ ಶುರುವಾಗಿಯೇ ಬಿಟ್ಟಿತಲ್ಲ! ಮರಗಿಡಗಳಡಿಯಲ್ಲಿ ತಲೆಯನ್ನುಳಿಸಿಕೊಂಡು ವಿಧಾನಸೌಧದ ಮುಂದಕ್ಕೆ ಬಂದರೆ ರಕ್ಷಣೆಗೆ ಏನಿದೆ? ಮಳೆಯ ಲಕ್ಷಣಗಳಿಲ್ಲದುದರಿಂದ ಬೆಳಿಗ್ಗೆ ರೈನ್‌ಕೋಟ್ ಕೂಡ ಮರೆತು ಬಂದಿದ್ದೆ. ಬಸ್ಸುಗಳು ನಿಲ್ಲುವ ಜಾಗ ತಲುಪಲು ಇನ್ನೂ ಕಡಿಮೆಯೆಂದರೂ ಇನ್ನೂರು ಮೀಟರ್‌ಗಳಷ್ಟು ನಡೆಯಬೇಕು, ಬಸ್ ನಿಲ್ಲುವ ಜಾಗದಲ್ಲಿ ಆಸರೆಗೆ ನಿಲ್ದಾಣವೂ ಇಲ್ಲ. ದಾರಿಗಾಣದೇ ವಿಧಾನಸೌಧದ ಮುಂದಿನ ಉದ್ದದ ರಸ್ತೆಯ ಈ ಅಂಚಿನಲ್ಲಿ ಮರದಡಿಯಲ್ಲಿ ಬ್ಯಾಗನ್ನು ತಲೆಯಮೇಲೆ ಹಿಡಿದುಕೊಂಡು ಮಳೆಯ ಆರ್ಭಟ ಕಡಿಮೆಯಾಗುವುದನ್ನೇ ಕಾಯುತ್ತ ನಿಂತೆ...

ಸುರಿಯುತ್ತಿರುವ ಜಡಿ ಮಳೆ, ಕರೀ ಹಾವಿನಂತೆ ಮಳೆಗೆ ತನ್ನನ್ನೊಡ್ಡಿಕೊಂಡು ಅಂಕುಡೊಂಕಾಗಿ ಬಿದ್ದಿರುವ ಟಾರು ರಸ್ತೆ, ರಸ್ತೆಯ ಇಕ್ಕೆಲಗಳಲ್ಲೂ ಎತ್ತರೆತ್ತರಕ್ಕೆ ಬೆಳೆದು, ರಸ್ತೆಗೆ ತಲೆಚಾಚಿಕೊಂಡು ನಿಂತಿರುವ ಮರಗಳು, ಆ ಮರಗಳ ಹಿಂದೆ ಎಡಕ್ಕೆ ದಟ್ಟವಾಗಿ ಬೆಳೆದು ನಿಂತ ಮಾನ್‌ಸೂನ್ ಕಾಡು, ಬಲಕ್ಕೆ ಅಷ್ಟೇ ಹಸಿರಾಗಿರುವ, ತೊಯ್ದು ತೊಟ್ಟಿಕ್ಕುತ್ತಿರುವ ಕಾಫಿ ತೋಟ, ರಸ್ತೆ ಬದಿಯ ಪೊದೆಗಳ ಮೇಲೆ ಹಬ್ಬಿನಿಂತಿರುವ ಕಾಡು ಮಲ್ಲಿಗೆ ಹೂಬಳ್ಳಿಗಳು, ಆಗೀಗ ಅಬ್ಬರಿಸುವ ಮಿಂಚು-ಗುಡುಗು, ಇದ್ದಕಿದ್ದಂತೆ ಬೀಸಿ ಮಳೆಯ ತಾನ ಬದಲಿಸುವ ಸುಳಿಗಾಳಿ, ಮಳೆಯಲ್ಲಿ ಸಿಕ್ಕು ಓಡುವ ಮನುಷ್ಯರಂತೆ ಸುಯ್ಯನೇ ಓಡುವ ವಾಹನಗಳು, ಅವು ಹಾರಿಸುವ ನೀರು, ಹಗಲೋ, ಇರುಳೋ, ಮುಂಜಾವೋ, ಗೋಧೂಳಿಯೋ ಗೊತ್ತಾಗದಂತೆ ಕವಿದುಕೊಂಡಿರುವ ಆಕಾಶ, ನಮ್ಮೆರಡು ಚತ್ರಿಗಳು, ಚತ್ರಿಗಳಡಿಯಲ್ಲಿ ನಾವಿಬ್ಬರು ಮತ್ತು ನಮ್ಮಿಬ್ಬರ ಜಡಿಮಳೆಯ ವಾಕಿಂಗ್!

ನಾಲ್ಕರ ಆಟದ ಸಮಯದಲ್ಲಿ, ಮಳೆಯಿದ್ದರೆ ಎಲ್ಲರೂ ದೊಡ್ಡದಾದ ಆಡಿಟೋರಿಯಮ್‌ನಲ್ಲಿರಬೇಕು, ಒಳಾಂಗಣ ಆಟಗಳು, ಹರಟೆ, ಮಾತು, ನಗು, ಬ್ಯಾಂಡ್‌ಸೆಟ್‌ನ ತಾಲೀಮು, ಯಾರೂ ರೂಮುಗಳಲ್ಲಿರುವಂತಿರಲಿಲ್ಲ, ಮಳೆಯಲ್ಲಿ ನೆನೆಯುವಂತಿರಲಿಲ್ಲ. ಮಳೆಯಿಲ್ಲದ ದಿನಗಳಲ್ಲಿ ಅವನು ಆಟೋಟದಲ್ಲಿ ತಲ್ಲೀನ, ಹೀಗೆ ಮಳೆಗಾಲದ ದಿನಗಳಲ್ಲಿ ಕಾಫಿ ಕುಡಿದುಬಂದು ಆಡಿಟೋರಿಯಮ್‌ನಲ್ಲಿ ಒಂದು ಸುತ್ತು ಟೆನಿಸ್ ಆಡಿ, ಯಾರೂ ಗಮನಿಸದಿರುವಾಗ ಚತ್ರಿಯೊಂದಿಗೆ ಹಿಂದಿನ ಬಾಗಿಲು ತೆರೆದುಕೊಂಡು, ಮರಗಿಡಗಳ ನಡುವಿನ ಕಾಡಿನ ಹಾದಿಯಲ್ಲಿ ಪಿಚಪಿಚ ಕೆಸರಿನ ದಾರಿಯಲ್ಲಿ ಹಾರುತ್ತ, ಜಿಗಿಯುತ್ತ ಬಂದು ಈ ಬದಿಯ ರಸ್ತೆ ತಲುಪುವಷ್ಟರಲ್ಲಿ ನಾನು ಅಲ್ಲಿ ನಿಂತಿರುತ್ತಿದ್ದೆ, 'ಛೆ! ಈವತ್ತು ನೀನು ಮೊದಲು!' ಅನ್ನುತ್ತಿದ್ದ ಮತ್ತು ಅವನು ತಡವಾಗಿ ಬಂದುದಕ್ಕೆ ಕಾರಣಗಳನ್ನು ಕೊಡುತ್ತಿದ್ದ. ವಾಕಿಂಗ್‌ಗೆ ಮೊದಲು ಯಾರು ಬಂದಿರುತ್ತಾರೆ ಎಂಬುದೂ ನಮ್ಮ ನಡುವಿನ ಸ್ಪರ್ಧೆಗೆ ವಿಷಯವಾಗಿತ್ತು. ನಮ್ಮಿಬ್ಬರ ಜೇಬುಗಳಲ್ಲಿರುತ್ತಿದ್ದ ಚಾಕೋಲೇಟ್‌ಗಳು, ಬಿಸ್ಕೆಟ್, ಅವರ ತಂದೆ ಅವನನ್ನು ನೋಡಲು ಬಂದಾಗ ತಂದಿದ್ದ ಮರಸೇಬು, ಬಾಳೆಹಣ್ಣು. ನನ್ನ ಕೈನಲ್ಲೊಂದು ಸಣ್ಣ ಪುಸ್ತಕ, ನಮ್ಮ ವಾಕಿಂಗ್ ಶುರು!

ಮಾತು, ಹಾಸ್ಯ, ನಗು; ನನ್ನ ಕವಿತಾವಾಚನ; ಓದಿದ ಕತೆ ಹೇಳುವುದು; ಸದಾ ಅವನನ್ನು ಅಚ್ಚರಿಗೊಳಿಸುತ್ತಿದ್ದ ವೈಜ್ಞಾನಿಕ ವಿಷಯಗಳು, ಸ್ನೇಹ, ಪ್ರೀತಿ, ಪ್ರೇಮ! ದೇಶಭಕ್ತಿ, ದೇವರು, ನಮ್ಮ ಕನಸುಗಳು, ಅಮ್ಮ, ಮಳೆ, ಕಾಡು, ಕತ್ತಲು, ಭಯ, ದೆವ್ವ, ವಾಹನಗಳು, ಕಾರುಗಳು ಹೀಗೆ ಮಾತನಾಡಲು ನೂರು ವಿಷಯ. ಅವುಗಳಿಗೆ ನಮ್ಮ ನೂರಾರು ವಿಶ್ಲೇಷಣೆಗಳು; ನಡುನಡುವೆ ಕುರುಕಲು ತಿಂಡಿ; ಕೆಲವೊಮ್ಮೆ ಚತ್ರಿಯನ್ನು ಸರಿಸಿ ಸುರಿಯುತ್ತಿರುವ ಮಳೆಗೆ ಮುಖವೊಡ್ಡಿ ಕೂಗುವುದು, ಜೋರಾಗಿ ನಗುವುದು; ಮಳೆಯಲ್ಲಿ ನೆನೆಯುತ್ತ ಚತ್ರಿ ಮಡಿಸಿ ಹಿಡಿದು ನಮ್ಮ ಚತ್ರಿಯುದ್ಧ! ಸುಮ್ಮನೇ ಹೋಗುತ್ತಿರುವಾಗ ರಸ್ತೆಯ ಸಣ್ಣ ಸಣ್ಣ ಗುಂಡಿಗಳಲ್ಲಿ ನಿಂತಿರುವ ನೀರಿಗೆ ಧೊಪ್ಪನೇ ಕಾಲಿಟ್ಟು ಜಿಗಿದು ನೀರು ಸಿಡಿಸುವುದು; ತಿರುವಿನಲ್ಲಿ ವಾಹನಗಳ ಸದ್ದಾದಾಗ ದೊಡ್ಡ ವಾಹನ ಬರಲಿ ಎಂದು ಬಯಸುವುದು; ಅದು ಜೋರಾಗಿ ಬಂದು ನೀರೆರಚಿ ಹೋಗಲು ರಸ್ತೆಯಲ್ಲಿ ಜಾಸ್ತಿ ನೀರು ನಿಂತಿರುತ್ತಿದ್ದ ಕಡೆ ಹೋಗಿ ನಿಲ್ಲುವುದು; ಕೈಯಲ್ಲಿ ಚತ್ರಿಯಿದ್ದೂ ಹಾರುವ ನೀರಿಗೆ ಅಡ್ಡ ಹಿಡಿಯದ ನಮ್ಮನ್ನು, ವಾಹನಗಳಲ್ಲಿನ ಜನ ವಿಚಿತ್ರವಾಗಿ ನೋಡುತ್ತ ಹೋಗುತ್ತಿದ್ದರು; ಅವನಾಗೇ ಇಷ್ಟಪಟ್ಟು ಕೇಳುತ್ತಿದ್ದ-ನಾನು ಹಾಡುತ್ತಿದ್ದ ಹಾಡುಗಳು, 'ಇಕ್ ದಿನ್ ಭಿಕ್ ಜಾಯೇಗಾ ಮಾಟಿ ಕೆ ಮೋಲ್', 'ರಿಮ್ ಜಿಮ್ ಗಿರೇ ಸಾವನ್', 'ಮೇಘಾರೆ, ಮೇಘಾರೆ,', 'ಜಲಲ ಜಲಲ ಜಲಧಾರೆ', ಮಳೆಗೂ ಕೂಡಾ ನಮ್ಮ ಆನಂದದ ಬಗ್ಗೆ ಹೊಟ್ಟೆಕಿಚ್ಚಾಗಿ ನಮ್ಮ ವಾಕಿಂಗ್ ಮುಗಿಯುವವರೆಗೂ ಹೋಗದೇ ನಮ್ಮನ್ನೇ ನೋಡುತ್ತ ತನ್ನಲ್ಲೇ ತಾನು ತೊಯ್ದುಕೊಳ್ಳುತ್ತಿರುತ್ತಿತ್ತು.

ಕೆಲವೊಮ್ಮೆ ಈ ಮಳೆಗಾಲದ ದಿನಗಳಲ್ಲಿ ನನಗೂ ಅವನಿಗೂ ಮುನಿಸಾಗಿಬಿಡುತ್ತಿತ್ತು (ಬಾಲ್ಯದ ಸ್ನೇಹಿತರ ನಡುವಿನ ಮುನಿಸಿಗೆ ಕಾರಣಗಳು ಬೇಕೇ?), ನಾನು ಅವನನ್ನೂ ಬಿಟ್ಟೇ ಹೋಗಿಬಿಟ್ಟಿರುತ್ತಿದ್ದೆ, ಆ ಕಾಡು ರಸ್ತೆಯ ಎರಡನೆಯ ತಿರುವು

ತಲುಪುವಷ್ಟರಲ್ಲಿ ಓಡೋಡಿ ಬರುತ್ತಿದ್ದ ಅವನು, ನನ್ನ ಕೈಲಿದ್ದ ಛತ್ರಿ ಕಸಿದುಕೊಂಡು ಮುಂದಕ್ಕೋಡಿ ಬಿಡುತ್ತಿದ್ದ. ಆಗ ಅವನನ್ನು ಹಿಡಿಯಲು ಓಡುವ ಸರದಿ ನನ್ನದು! ಇಬ್ಬರೂ ಓಡಿ, ಓಡಿ ಸುಸ್ತಾಗಿ ಮಳೆಯಲ್ಲಿ ಬಿಸಿ ಏದುಸಿರು ಬಿಡುತ್ತ ನಿಲ್ಲುತ್ತಿದ್ದೆವು, ನಾನು ಇನ್ನೂ ಸಿಟ್ಟಾಗಿದ್ದರೆ ಅವನು ತನ್ನ ಮುಖವರಳಿಸಿ, ಮೂಗು ದಪ್ಪ ಮಾಡಿ, ಕಣ್ಣುಗಳನ್ನು ಹಿಗ್ಗಿಸಿ, ಕೈಗಳಿಂದ ತನ್ನ ತುಂಬುಗೆನ್ನೆಗಳನ್ನೆಳೆದುಕೊಂಡು ವಿಧ ವಿಧವಾದ ಮುಖಗಳನ್ನು ಮಾಡುತ್ತಿದ್ದ. ಅದನ್ನು ನೋಡಿ ಎಂತವರಿಗೂ ನಗದೇ ಇರಲಾಗುತ್ತಿರಲಿಲ್ಲ! ಕಾರಣ, ವಿವರಣೆ, ಕ್ಷಮಾಯಾಚನೆಯಿಲ್ಲದೇ ಮುನಿಸು ರದ್ದಾಗಿಬಿಡುತ್ತಿತ್ತು. ಮತ್ತೆ ಹಿಂತಿರುಗುವ ಹಾದಿಯಲ್ಲಿ ಮತ್ತದೇ ಮಾತು, ನಗು, ಹಾಡು! ನಾವು ವಾಪಸ್ಸು ರೂಮು ತಲುಪುವ ಹೊತ್ತಿಗೆ, ಇರುಳ್ಗತ್ತಲು, ಮಳೆಯ ಜೊತೆಯಾಗಿರುತ್ತಿತ್ತು, ನಾವು ಛತ್ರಿಗಳಿದ್ದೂ ತೊಯ್ದು ತೊಪ್ಪೆಯಾಗಿರುತ್ತಿದ್ದೆವು...

ಮಳೆಯಲ್ಲೇ ವಿಧಾನ ಸೌಧದ ಮುಂದಕ್ಕೆ ನಡೆಯಲಾರಂಭಿಸಿದೆ, ಬ್ಯಾಗು ನನ್ನ ತಲೆಯಮೇಲಿರಲಿಲ್ಲ, ಮಳೆಗೆ ನನ್ನನ್ನು ಗುರುತಿಸಿ ಖುಷಿಯಾಯಿತು, ಭೋರ್ಗರೆಯುತ್ತ ಸುರಿಯಿತು, ನಡೆಯುತ್ತ ನಾನು ನಸುನಗುತಿದ್ದುದು ನನ್ನ ಗಮನಕ್ಕೆ ಬಂತು, ವಿಧಾನಸೌಧದ ಮುಂದೆ ನಿಂತೆ, ಪೂರ್ತಿ ಹತ್ತು ನಿಮಿಷ ಬಸ್ಸು ಬರಲೇ ಇಲ್ಲ, ಬಸ್ಸಿಗೆ ಕಾಯುತ್ತ ನಿಂತವರೆಲ್ಲ ಹಿಂದಿನ ಹೈಕೋರ್ಟ್ ಜಗುಲಿಯಲ್ಲಿದ್ದರು, ನಾನು ನಿಂತೇ ಇದ್ದೆ, ಮಳೆ ನೆನೆ ನೆನೆದು ನನ್ನನ್ನು ನೆನೆಸಿತು, ಬೆನ್ನ ಹುರಿಗುಂಟ ಹರಿದು ನನ್ನ ಮೈ ನೇವರಿಸಿತು, ಗಾಳಿಗೂ ನನ್ನ-ಮಳೆಯ ಪ್ರೀತಿಕಂಡು ಆಶ್ಚರ್ಯವಾಗಿರಬೇಕು, ಅದೂ ಬೀಸಿ ನನ್ನನ್ನು ತಳ್ಳಿ, ಉಸಿರುಗಟ್ಟಿಸಿ, ಯಾರಿವನು, ಮಳೆಯ ತವರಿನವನಿರಬೇಕು ಎಂದುಕೊಂಡಿತು...

ಬಸ್ಸು ಬಂದು ನಿಂತಾಗ ಮೆಲ್ಲನೇ ಮಳೆಗೊಂದು ಮುತ್ತನಿತ್ತು ಬಸ್ ಹತ್ತಿದೆ, ನೀರು ತೊಟ್ಟಿಕ್ಕುತ್ತಿದ್ದ ನನ್ನ ಮುಖದಲ್ಲಿ ಇನ್ನೂ ನಸುನಗು ಇತ್ತೇನೋ, ಬಹು ಹಳೆಯ ಸ್ನೇಹಿತನಂತೆ ಕಂಡಕ್ಟರ್ ನಕ್ಕು ಕೇಳಿದ, ‘ಏನ್ರೀ ಸಕ್ಕತ್ ಮಳೇಲೀ ಸಕ್ಕತ್ ನೆಂದಿದೀರಾ?’ನಾನೂ ನಕ್ಕೆ. ಹೊರಟ ಬಸ್ಸಿನ ಕಿಟಕಿಯ ಹೊರಗೆ ನನ್ನ ಹಿಂದೆಯೇ ಮಳೆ ಕೂಡ ಬರುತ್ತಿತ್ತು, ಬಹಳ ದಿನಗಳ ನಂತರ ಸಿಕ್ಕವನ್ನನ್ನು ಹೋಗಗೊಡದ ಸ್ನೇಹಿತನಂತೆ...